ಇ) ರೂ. 5.00 ಲಕ್ಷಗಳ ಅನುದಾನವನ್ನು ಹೊರತುಪಡಿಸಿ ಬೇರೆಯಾವುದೇ ಸೌಲಭ್ಯ ಒದಗಿಸಲಾಗುತ್ತಿಲ್ಲ.

ಚಿಂತಾಮಣಿ ತಾಲ್ಲೂಕಿನ ಕಂಚಾರ್ಲಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಚಿಕಿತ್ಸಾಲಯಕ್ಕೆ ನಿವೇಶನ

3646(4147) ಶ್ರೀ ಚೌಡರೆಡ್ಡಿ. (ಚಿಂತಾಮಣಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಕಂಬಾರ್ಲಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಚಿಕಿತ್ಸಾಲಯಕ್ಕೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ ಕೋಲಾರವರು ಸ್ವಂತ ಕಟ್ಟಡ ಕಟ್ಟಲು ಅನುದಾನ ಬಿಡುಗಡೆ ಮಾಡಿರುವುದು ನಿಜವೇ;

ಇ) ಸದರಿ ಚಿಕಿತ್ಸಾಲಯಕ್ಕೆ ಕಟ್ಟಡ ಕಟ್ಟಲು ಸ್ವಂತ ಜಾಗ ಇಲ್ಲದೇ ಕಟ್ಟಡ ಕಟ್ಟಲು ಪ್ರಾರಂಭ ಆಗದೇ ಇರುವುದು ನಿಜವೇ;

ಈ) ಕಂಚಾರ್ಲಹಳ್ಳಿ ಪಂಚಾಯ್ತಿಯಿಂದ ಅಥವಾ ಕಂದಾಯ ಇಲಾಖೆಯಿಂದಾದರೂ ಕಟ್ಟಡ ಕಟ್ಟಲು ನಿವೇಶನ ಮಂಜೂರು ಮಾಡಿಸಿಕೊಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ; (ವಿವರ ನೀಡುವುದು)?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಬಂದಿದೆ.

ಆ) ಇಲ್ಲ

ಇ) ನಿವೇಶನ ಲಭ್ಯವಿರುವುದಿಲ್ಲ ಎಂಬ ವಿಷಯ ನಿಜ

ಈ) ಕೆಂಚಾರ್ಲಹಳ್ಳಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಕ್ಕೆ ಕಟ್ಟಡಕ್ಕೋಸ್ಕರ ನಿವೇಶನ ಒದಗಿಸುವಂತೆ ಗ್ರಾಮ ಪಂಚಾಯತಿಯನ್ನು ಮತ್ತು ಸ್ಥಳೀಯ ಜನಪ್ರತಿನಿಧಿಗಳನ್ನು ಕೋರಲಾಗಿದೆ.

ರಾಜ್ಯ ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಪತ್ರಗಳ ಆಡಿಟ್

3647(4355) ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಪತ್ರಗಳನ್ನು ಇಲ್ಲಿಯವರೆಗೆ ಆಡಿಟ್ ಮಾಡಿಸಲಾಗಿದೆ; ಇದರ ವರದಿಯನ್ನು ಸಿ.ಎ.ಜಿ.ರವರಿಗೆ ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ ಅವರ ಪ್ರತಿಕ್ರಿಯೆ ಏನು;

ಆ) ಸಮಾಜ ಕಲ್ಯಾಣ ಇಲಾಖೆಗೆ ಯಾವ ಯಾವ ಯೋಜನೆಗೆ ಎಷ್ಟೆಷ್ಟು ಕೇಂದ್ರ ನೆರವು ಬರುತ್ತಿದೆ; (ಮೂರು ವರ್ಷಗಳ ವರ್ಷವಾರು ವಿವರ ನೀಡುವುದು);

ಇ) ಕೇಂದ್ರದಿಂದ ಪಡೆದ ಎಲ್ಲಾ ಹಣಕಾಸು ಅನುದಾನಕ್ಕೆ ಲೆಕ್ಕಪತ್ರದ ವಿವರ ಕೇಂದ್ರಕ್ಕೆ ನೀಡಲಾಗಿದೆಯೇ; ಹಾಗಿದ್ದರೆ, ಅವರ ಪ್ರತಿಕ್ರಿಯೆ ಏನು;

ಈ) ಈ ನೆರವಿನ ಪ್ರಮಾಣಕ್ಕೆ ಅನುಗುಣವಾಗಿ ಲೆಕ್ಕಪತ್ರ ನೀಡದಿದ್ದರೆ, ನೆರವಿನ ಪ್ರಮಾಣ ತಗ್ಗುವ ಸೂಚನೆಗಳಿಲ್ಲವೆ; ಈ ಕೊರತೆ ನಿವಾರಿಸಲು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :